**ದಿನಾಂಕಃ 09-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಮುಂದುವೆರದ ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ**

2 ನೇ ಎದುರುದಾರರ ಸಂಸ್ಥೆಯಲ್ಲಿ ವಿಮೆಗೆ ಒಳಪಟ್ಟ 1 ನೇ ಎದುರುರುದಾರನ ಮಾಲೀಕತ್ವದ ಮೋಟಾರ್ ಸೈಕಲ್ ಸಂಖ್ಯೆ ಕೆಎ.17/ಹೆಚ್.ಇ.1805 ಗೆ ಸಂಬಂಧಪಟ್ಟ ವಿಮಾ ಪಾಲಿಸಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದೇನೆ, ಅದನ್ನು ನಿ.ಆರ್-4 ಎಂದು ಗುರುತಿಸಲಾಯಿತು.

2 ನೇ ಎದುರುದಾರರ ವಿರುದ್ದ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ಈ ಅರ್ಜಿಗೆ ಸಂಬಂಧಪಟ್ಟ ಕೆಲವು ಸಂಗತಿಗಳ ನನಗೆ ವೈಯಕ್ತಿಕ

ಮಾಹಿತಿ ಇದೆ ಮತ್ತು ಕೆಲವು ಸಂಗತಿಗಳ ಬಗ್ಗೆ ದಾಖಲಾತಿಗಳ ಆಧಾರದ ಮೇರೆಗೆ ಮಾಹಿತಿ ಇದೆ . ನಾನು ಲಾ-ಗ್ರಾಜುಯೆಟ್ ಆಗಿದ್ದೇನೆ ಎಂದರೆ ಸರಿ. ಸುಮಾರು 3 ವರ್ಷಗಳ ಕಾಲ ನಾನು ಬೆಳಗಾವಿಯ ನ್ಯಾಯಾಲಯಗಳಲ್ಲಿ ನ್ಯಾಯವಾದಿಯಾಗಿ ಕೆಲಸ ಮಾಡಿದ್ದೇನೆ . ಕಳೆದ 12 ವರ್ಷಗಳಿಂದ ನಾನು ಬೇರೆ-ಬೇರೆ ಕಂಪನಿಗಳಲ್ಲಿ ಅಂದರೆ 1) ಐ.ಸಿ.ಐ.ಸಿ.ಐ ಲೊಂಬಾರ್ಡ , 2) ಬಜಾಜ್ ಅಲಾಯನ್ಸ ಜನರಲ್ ಇನ್ಸೂರನ್ಸ , 3) ರಾಯಲ್ ಸುಂದರಂ , 4) ಹೆಚ್.ಡಿ.ಎಫ್.ಸಿ ಯರ್ಗೊ, ಹಾಗು ಈಗ ಪ್ರಸ್ತುತ ಚೊಲಮಂಡಳಂ ನಲ್ಲಿ ಕೆಲಸ ಮಾಡುತ್ತಿದ್ದೇನೆ . ನಾನು ಹಲವಾರು ಕಂಪನಿಗಳಲ್ಲಿ Legal Officer ಎಂದು ಸೇವೆ ಸಲ್ಲಿಸಿರುವ ಕಾರಣಕ್ಕಾಗಿ ನನಗೆ ಕಾನೂನಿನ ಜ್ಞಾನ ಇದೆ ಎಂದರೆ ಸರಿ. ನಾನು ಅನೇಕ ಪ್ರಕರಣಗಳಲ್ಲಿ ಸಾಕ್ಷಿಯನ್ನು ನ್ಯಾಯಾಲಯದಲ್ಲಿ ನುಡಿದಿದ್ದೇನೆ ಎಂದರೆ ಸರಿ. ದಿಃ 09-11-2009 ರಂದು I.R.D.A ರವರು ಎಲ್ಲಾ ಜನರಲ್ ಇನ್ಸೂರನ್ಸ ಕಂಪನಿಯ C.E.O ರವರಿಗೆ ಒಂದು Circular ಹೊರಡಿಸಿದ್ದಾರೆ ಆ ಬಗ್ಗೆ ನಿಮಗೆ ಮಾಹಿತಿ ಇದಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ Circular ನ

ನಂಬರ ಹೇಳಿದರೆ ಅದನ್ನು ನೋಡಿ ನಾನು ಹೇಳಬಲ್ಲೆ ಏಕೆಂದರೆ ಪ್ರತಿನಿತ್ಯ ಅನೇಕ Circular ಗಳನ್ನು ಹೊರಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ದಿಃ 16-12-2009 ರಂದು I.R.D.A ರವರು ಒಂದು ಆದೇಶ ಮಾಡಿದ್ದಾರೆ ಆ ಬಗ್ಗೆ ನಿಮಗೆ ಮಾಹಿತಿ ಇದಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ಆದೇಶದ ಹಿನ್ನೆಲೆ ಅಥವಾ Circular ನಂಬರನ್ನು ನಿಖರವಾಗಿ ತನಗೆ ಹೇಳಿದರೆ ಆ ಬಗ್ಗೆ ತಾನು ಹೇಳಬಲ್ಲೆ ಎಂದು ನುಡಿಯುತ್ತಾರೆ. ಸದರಿ ದಿಃ 16-12-2009 ರಂದು I.R.D.A ರವರು ಮಾಡಿರುವ ಆದೇಶದ ಮೇರೆಗೆ Tariff Authority Committee ಯವರು ಎಲ್ಲಾ ಇನ್ಸೂರನ್ಸ ಕಂಪನಿಯವರಿಗೆ ಒಂದು Instruction ಕೊಟ್ಟಿದ್ದಾರೆ ಆ ಬಗ್ಗೆ ನಿಮಗೆ ಮಾಹಿತಿ ಇದಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ Instruction ಯಾವ ವಿಷಯಕ್ಕೆ ಸಂಬಂಧಿಸಿದೆ ಎನ್ನುವ ಬಗ್ಗೆ ನಿಖರವಾಗಿ ಪ್ರಶ್ನೆ ಕೇಳಿದರೆ ತಾನು ಹೇಳಬಲ್ಲೆ ಎಂದು ನುಡಿಯುತ್ತಾರೆ. ಸದರಿ Instructions ಪ್ರಕಾರ All inmates of Car and pillion rider of the motor cycle should be

covered under insurance policy ಎಂದು ಆದೇಶ ಹೊರಡಿಸಿದ್ದಾರೆ ಎಂದರೆ ಸರಿಯಲ್ಲ. I.R.D.A ಸಂಸ್ಥೆ ಎಂದರೆ Insurance Regulatory Development Authority ಆಗಿದೆ ಮತ್ತು ಅದು ಎಲ್ಲಾ ಇನ್ಸೂರರನ್ಸ ಕಂಪನಿಗಳಿಗೆ ಸಂಬಂಧಪಟ್ಟಿದ್ದು ಆಗಿರುತ್ತದೆ . ಸದರಿ I.R.D.A ರವರು All inmates of Car and pillion rider of the motor cycle should be covered under insurance policy ಮಾಡಬೇಕು ಎಂದು ಮತ್ತು ಸದರಿ Policy ಗಳು comprehensive policy and package policy ಗಳಿಗೂ ಸಹ ಅನ್ವಯಿಸಬೇಕು ಎಂದು ಆದೇಶ ಹೊರಡಿಸಿದ್ದಾರೆ ಎಂದರೆ ಸರಿ. ಎಲ್ಲಾ ಇನ್ಸೂರರನ್ಸ ಕಂಪನಿಗಳು ಸದರಿ comprehensive policy and package policy ಗಳಿಗೆ ಸದರಿ I.R.D.A ರವರ ಆದೇಶ ಮತ್ತು T.A.C ರವರ ಆದೇಶವನ್ನು ಒಪ್ಪಿಕೊಂಡು ಮಾನ್ಯ ಸುಪ್ರಿಂ ಕೋರ್ಟ ಮತ್ತು ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಹಾಗು Tribunal Court ಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು Not pressed ಎಂದು ಹಿಂದಕ್ಕೆ ಪಡೆದು

ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಶೋ-ರೂಮ್ ನಿಂದ ಹೊಸ ವಾಹನವನ್ನು ಖರೀದಿ ಮಾಡಿದ ಸಮಯದಲ್ಲಿ ನಮ್ಮ ಸಂಸ್ಥೆ ಇನ್ಸೂರನ್ಸ ಪಾಲಿಸಿ ನೀಡಿದ ನಂತರವೇ ಸದರಿ ಹೊಸ ವಾಹನ ರಸ್ತೆಗೆ ಇಳಿದಿರುತ್ತದೆ ಎಂದರೆ ಸರಿ. ಸದರಿ ಹೊಸ ವಾಹನದ ಚೆಸ್ಸಿ ನಂಬರ ಮತ್ತು ನಿ.ಆರ್-4 ನಮ್ಮ ಸಂಸ್ಥೆ ನೀಡಿರುವ ವಿಮಾ ಪಾಲಿಸಿಯಲ್ಲಿ ನಮೂದಿಸಿರುವ ವಾಹನದ ಚೆಸ್ಸಿ ನಂಬರ ಒಂದೇ ಆಗಿರುತ್ತವೆ ಎಂದರೆ ಸರಿ. ಸದರಿ ವಾಹನದ ವಿಮಾ ಪಾಲಿಸಿ (ಝುರಾಕ್ಸ ಪ್ರತಿ) ಮತ್ತು ನಿ.ಆರ್-4 ರ ವಿಮಾ ಪಾಲಿಸಿ ಒಂದೇ ವಾಹನಕ್ಕೆ ಸಂಬಂಧ ಪಟ್ಟಿದ್ದು ಆಗಿರುತ್ತವೆ. ದಿಃ 22-10-2019 ರಿಂದ ದಿಃ 21-10-2024 ರವರೆಗೆ ಸದರಿ ನಿ.ಆರ್-4 ರ ವಿಮಾ ಪಾಲಿಸಿ ಸದರಿ ವಾಹನಕ್ಕೆ ಚಾಲ್ತಿಯಲ್ಲಿತ್ತು ಎಂದರೆ ಸರಿ . ಸದರಿ ನಿ.ಆರ್-4 ರ ವಿಮಾ ಪಾಲಿಸಿ ಪ್ಯಾಕೇಜ್ ಪಾಲಿಸಿ ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2 wheeler Bundle policy ಆಗಿರುತ್ತದೆ ಎಂದು ನುಡಿಯುತ್ತಾರೆ . ಸದರಿ ವಾಹನದ ವಿಮಾ ಪಾಲಿಸಿ (ಝುರಾಕ್ಸ ಪ್ರತಿ) ಪ್ರತಿಯಲ್ಲಿ ಪ್ಯಾಕೇಜ್ 2 wheeler policy ಎಂದು ನಮೂದಿಸಲಾಗಿರುತ್ತದೆ ಎಂದರೆ

ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್- 4 ರ ಪ್ರತಿ ಮೂಲ ಪ್ರತಿಯಾಗಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಯಥಾ ಪ್ರತಿಯಾಗಿರುತ್ತದೆ ಎಂದು ನುಡಿಯತ್ತಾರೆ .

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.